**ದಿನಾಂಕಃ 07/03/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದೇನೆ. ಅದರಲ್ಲಿ ಬರೆದಿರುವ ಅಂಶಗಳು ಸತ್ಯವಾಗಿದೆ. ಅದನ್ನು ನಾನೇ ನನ್ನ ವಕೀಲರಿಗೆ ಹೇಳಿ ಬರೆಸಿದ್ದು, ಅದರಲ್ಲಿ ನನ್ನ ಸಹಿ ಇದೆ.

ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿದ್ದೇನೆ.

1. ಅಲಭ್ಯ ಪ್ರಮಾಣ ಪತ್ರವನ್ನು **ನಿಪಿ.1** ಎಂದು,
2. ದಿನಾಂಕಃ 08.02.2026 ರ "ಪ್ರಜಾನುಡಿ" ದಿನಪತ್ರಿಕೆಯನ್ನು **ನಿಪಿ.2** ಎಂದು, ಸದರಿ ದಿನಪತ್ರಿಕೆಯ ಸಂಬಂಧಪಟ್ಟ ಭಾಗವನ್ನು **ನಿ.ಪಿ.2(ಎ)** ಎಂದು ಗುರುತಿಸಲಾಯಿತು.
3. ವಂಶವೃಕ್ಷ ಪ್ರಮಾಣ ಪತ್ರವನ್ನು **ನಿಪಿ.3** ಎಂದು,
4. 1 ರಿಂದ 3 ನೇ ಅರ್ಜಿದಾರರ ಆಧಾರ್ ಕಾರ್ಡ್‌ನ ನೋಟರೈಸ್ ಪ್ರತಿಯನ್ನು **ನಿಪಿ.4** ರಿಂದ **ನಿಪಿ-6** ಎಂದು ಗುರುತಿಸಲಾಯಿತು.

ಪಾಟೀಸವಾಲುಃ ಎದುರುದಾರರು ಏಕಪಕ್ಷೀಯವಾಗಿರುವುದರಿಂದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**1 ನೇ ಹೆಚ್.ಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**